ಕರ್ನಾಟಕ ವಿಧಾನಸಭೆ

ಗುರುವಾರ 8ನೇ ಮಾರ್ಚ್ 2001 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11- 10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- (ಶ್ರೀ ಎಂ.ವಿ. ವೆಂಕಟಪ್ಪ ರವರು) ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಹುಬ್ಬಳ್ಳಿ- ಧಾರವಾಡ ನಗರಕ್ಕೆ ಕುಡಿಯುವ ನೀರಿನ ಯೋಜನೆ

91 (865) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ (ಹುಬ್ಬಳ್ಳಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ- ಧಾರವಾಡ ಅವಳಿ ನಗರಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಯೋಜನೆಯ ಸಂಪೂರ್ಣ ವಿವರಣೆ ನೀಡುವುದು?

ಇ) ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಹುಬ್ಬಳ್ಳಿ- ದಾರವಾಡ ಅವಳಿ ನಗರಕ್ಕೆ ಅಗತ್ಯ ನೀರು ಪೂರೈಕೆ ಆಗುತ್ತದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಇದೆ

ಆ) ಹುಬ್ಬಳ್ಳಿ- ಧಾರವಾಡ ಅವಳಿ ನಗರಕ್ಕೆ ಸಾಕಷ್ಟು ನೀರನ್ನು ಒದಗಿಸಲು ಮಲಪ್ರಭ 3ನೇ ಹಂತದ ಯೋಜನೆಯನ್ನು ರೂ. 144.034 ಕೋಟಿಗಳಿಗೆ ತಯಾರಿಸಿ ಸರ್ಕಾರದ ಅನುಮೋದನೆಗಾಗಿ ನಿಲ್ಲಿಸಲಾಗಿದ್ದು, ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಯೋಜನೆಯನ್ನು 2006ರಲ್ಲಿ ಇರಬಹುದಾದಂತ 9,00,000 ಜನಸಂಖ್ಯೆಗೆ ಪ್ರತಿ ದಿನ 62. 19 ದಶಲಕ್ಷ ಲೀಟರ್ ಹಾಗೂ 2021ರಲ್ಲಿ ಇರಬಹುದಾದ 12, 50,000 ಜನಸಂಖ್ಯೆಗೆ ಬೇಕಾದ ಅಂತಿಮ ನೀರಿನ ಬೇಡಿಕೆ 113.04 ದಶಲಕ್ಷ ಲೀಟರ್ ಹೆಚ್ಚುವರಿ ನೀರನ್ನು ಒದಗಿಸಲು ವಿನ್ಯಾಸ ಮಾಡಲಾಗಿದೆ.

ಇ) ಹೌದು

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ : ಮಾನ್ಯ ಅಧ್ಯಕ್ಷರೇ, ಈ ಅವಳಿ ನಗರದಲ್ಲಿ ನೀರಿಗಾಗಿ ಪ್ರತಿದಿನ ಹೋರಾಟ ನಡೆಯುತ್ತಿದೆ. ಇದಕ್ಕೆ ಕಾರಣಗಳೇನು? ವಿಶೇಷವಾಗಿ ಹುಬ್ಬಳ್ಳಿ ಧಾರವಾಡ ನಗರದೊಳಗೆ 8 ದಿವಸಕ್ಕೊಮ್ಮೆ ನೀರು ಬಿಡಲಾಗುತ್ತದೆ. ಆದರಿಂದ ಪ್ರತಿ ದಿವಸ ಇಲ್ಲಿ ನೀರಿಗಾಗಿ ಜನ ಎಲ್ಲಾ ಕೆಲಸವನ್ನು ಬಿಟ್ಟು ಹೋರಾಟ ಮಾಡುತ್ತಿದ್ದಾರೆ. ತುರ್ತಾಗಿ ನೀವು ಕಾರ್ಯಕ್ರಮ ಕೈಗೊಳ್ಳದೇ ಹೋದರೆ, ಇಲ್ಲಿನ ಪರಿಸ್ಥಿತಿ ಗಂಭೀರವಾಗುತ್ತದೆ. ಎಂಬುದನ್ನು ತಮ್ಮ ಮೂಲಕ ಸಚಿವರಿಗೆ ಕೇಳುತ್ತಾ, ಕೂಡಲೇ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಈ ಹುಬ್ಬಳ್ಳಿ ಧಾರವಾಡ ಮಹಾನಗರಗಳಲ್ಲಿ ಕಳೆದ ಒಂದು ತಿಂಗಳಿಂದ ಕುಡಿಯುವ ನೀರಿನ ಹಾಹಾಕಾರ ಪ್ರಾರಂಭವಾಗಿದೆ. ಬಹುಶಃ ಈಗ ಒಂದು ವಾರಕ್ಕೊಮ್ಮೆ, ಹದಿನೈದು ದಿವಸಕ್ಕೊಮ್ಮೆ ನೀರು ಬರುತ್ತಾ ಇದೆ. ಜನರು ಈಗಾಗಲೇ ರಸ್ತೆ ರೋಖೋ ಮತ್ತು ಧರಣಿ ಮಾಡುವಂಥಾದ್ದು ಪ್ರಾರಂಭವಾಗಿದೆ. ಇದಕ್ಕೆ ತಾವೇನಾದರೂ ತಕ್ಷಣ ಕ್ರಮ ಕೈಗೊಳ್ಳದೇ ಇದ್ದರೆ, ಜನರು ದಂಗೆ ಏಳುವಂಥ ಪರಿಸ್ಥಿತಿ ಬರುತ್ತದೆ. ಆಮೇಲೆ 44 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಸ್ಯಾಂಕ್ಷನ್ ಮಾಡಿದ್ದೀರಿ. ಇನ್ನೂವರೆಗೆ ಕೆಲಸ ಪ್ರಾರಂಭ ಮಾಡಿಲ್ಲ. ಸವದತ್ತಿಯಿಂದ ಹಮ್ಮಿನಬಾವಿ ವರೆಗೆ ಏನು ಪೈಪ್‌ಲೈನ್ ಲೀಕೇಜ್ ಆಗಿದೆ, ಆ ಲೀಕೇಜ್ ರೀಪ್ಲೇಸ್ ಮಾಡುವಂಥ 44 ಕೋಟಿ ರೂಪಾಯಿಗಳ ಯೋಜನೆ ಏನಿದೆ, ಇದರ ಬಗ್ಗೆ ಕಳೆದ ಒಂದು ವರ್ಷದಿಂದ ಪ್ರಯತ್ನ ಮಾಡಿದಮೇಲೆ, ನಮ್ಮ ಉಸ್ತುವಾರಿ ಸಚಿವರೂ ಇಲ್ಲಿಯೇ ಇದ್ದಾರೆ. ಎಲ್ಲರೂ ಕೂಡಿ ಪ್ರಯತ್ನ ಮಾಡಿದೆವು. ಅದು ಸ್ಯಾಂಕ್ಷನ್ ಆಯಿತು. ಆದರೆ, ಇನ್ನೂ ಕೆಲಸ ಪ್ರಾರಂಭವಾಗುವಂಥಾದ್ದು ಆಗಬೇಕು. ಆಮೇಲೆ ತುರ್ತು ಕ್ರಮ ಕೈಗೊಳ್ಳುವಂಥದ್ದು, ಬೋರ್‌ವೆಲ್ಸ್ ಹಾಕುವಂಥಾದ್ದೂ ನಡೆಯಬೇಕು. ಆಮೇಲೆ ನಾನು ಇನ್ನೊಂದು ಸಲಹೆ ಮಾಡುವಂಥಾದ್ದು, ಮಲಪ್ರಭಾ ಮೂರನೇ ಹಂತದ ಯೋಜನೆ 130 ಕೋಟಿ ರೂಪಾಯಿ ಸ್ಕೀಮ್ ಏನಿದೆ, ಅದು ಇನ್ನೂವರೆಗೆ ನೆನೆಗುದಿಗೆ ಬಿದ್ದಿದೆ. ಇನ್ನೂವರೆಗೆ ಅದರ ಬಗ್ಗೆ ಸರ್ಕಾರ ಏನು ನಿರ್ಣಯ ಕೈಗೊಂಡಿಲ್ಲ. ಅದರ ಬಗ್ಗೆ ತಾವೇನು ಮಾಡುತ್ತೀರಿ ಎನ್ನುವಂಥಾದ್ದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ - ಧಾರವಾಡ ನಗರಪ್ರದೇಶದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಇದೆ; ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ, ಆ ಜನರ ಸಮಸ್ಯೆ ನೀಗಿಸಲು ಮೊದಲು ನೀರುಸಾಗರದಿಂದ ಕುಡಿಯುವ ನೀರಿನ ಯೋಜನೆ ಅದು ಬಹಳ ಹಳೆಯ ಯೋಜನೆ. 1950ರೊಳಗೆ ಮಾಡಿರತಕ್ಕ ಯೋಜನೆ ಅದು. ಆ ಯೋಜನೆಯಿಂದ ಸುಮಾರು 36 ಎಂ.ಎಲ್.ಡಿ. ನೀರನ್ನು ಪಡೆಯುತ್ತಾ ಇದ್ದೇವೆ. ಅದೇರೀತಿ ಮಲಪ್ರಭಾ ಮೊದಲನೇ ಮತ್ತು ಎರಡನೇ ಹಂತದಿಂದ ಸುಮಾರು 68 ಎಂ.ಎಲ್.ಡಿ. ನೀರು ಪಡೆಯುತ್ತೇವೆ. ಈಗ ಈ 68 ಎಂ.ಎಲ್.ಡಿ. ನೀರು ಮಲಪ್ರಭಾ ಜಲಾಶಯದಿಂದ ನಾವೇನು ನೀರು ತೆಗೆದುಕೊಳ್ಳುತ್ತೇವೆ, ಅದರೊಳಗೆ ವಿಶೇಷವಾಗಿ, ಅಷ್ಟೊಂದು ಪೂರ್ತಿಯಾಗಿ ನೀರನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವೆಂಬುದನ್ನು ನಾನೂ ಒಪ್ಪಿಕೊಂಡಿದ್ದೇನೆ. ಈ 68 ಎಂ.ಎಲ್.ಡಿ. ಯೊಳಗೆ ಕೇವಲ 59 ಎಂ.ಎಲ್.ಡಿ. ನೀರು ಮಾತ್ರ ಬರುತ್ತದೆ. ಇದಕ್ಕೆ ಅನೇಕ ಕಾರಣಗಳು ಇವೆ. ಪೈಪುಗಳು ಒಡೆದು, ಲೀಕೇಜ್ ಆಗಿ, ಅನೇಕ ಹಳ್ಳಿಯವರೂ ಕೂಡ ಅನಧಿಕೃತವಾಗಿ ನೀರನ್ನು ಬಹಕೆ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಅಲ್ಲಿಂದ ಎಷ್ಟು ನೀರು ಬರಬೇಕಾಗಿತ್ತೋ ಅಷ್ಟು ಬರುತ್ತಾ ಇಲ್ಲವೆಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ಅದೇ ರೀತಿ, ಇವತ್ತು ಸುಮಾರು 83 ಎಂ.ಎಲ್.ಡಿ. ನೀರನ್ನು ಕೊಡುತ್ತಾ ಇದ್ದೇವೆ. ಅಲ್ಲಿಗೆ 36 ಮತ್ತು 68 ಎಂ.ಎಲ್.ಡಿ. ನೀರನ್ನು ಕೂಡಿಸಿದರೆ, ಸುಮಾರು 83 ಎಂ.ಎಲ್.ಡಿ. ನೀರನ್ನು ನಾವು ಕೊಡುತ್ತೇವೆ. ಇಷ್ಟು ಕೊಟ್ಟರೂ ಕೂಡ ನೀರಿನ ಅಭಾವ ಇನ್ನೂ ಇದೆ. ಆ ದೃಷ್ಟಿಯಿಂದ ನಮ್ಮ ಸರ್ಕಾರ ಬಂದಮೇಲೆ, ಆ ಭಾಗದ ಎಲ್ಲಾ ಶಾಸಕರುಗಳು ಮತ್ತು ಜನರು ಒತ್ತಾಯ

ಮಾಡಿದಮೇಲೆ, ಇವತ್ತು ವಿಶೇಷವಾಗಿ 44 ಕೋಟಿ ರೂಪಾಯಿಗಳ ಯೋಜನೆಯನ್ನು ರೂಪಿಸಿ ಅದರಲ್ಲಿ ಪೈಪ್ಸ್ ಎನು ಲೀಕೇಜಸ್ ಇದ್ದವು ಆ ಪಿ.ವಿ.ಸಿ. ಪೈಪ್ಸ್ ತೆಗೆದು ಎಂ.ಎಸ್. ಪೈಪ್ಸ್ ಹಾಕಬೇಕೆಂದು ನಾವು ಆ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಅದೇ ರೀತಿಯಲ್ಲಿ 5 ಒವರ್ ಹೆಡ್ ಟ್ಯಾಂಕ್‌ಗಳನ್ನು ಕಟ್ಟಬೇಕೆಂದು ಹೇಳಿ ಸುಮಾರು 44 ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿಯನ್ನು ನೀಡಿ ಕಾಮಗಾರಿಯನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಈ ಕಾಮಗಾರಿಯನ್ನು ಎಲ್ ಅಂಡ್ ಟಿ ಎನ್ನುವ ಒಂದು ಪ್ರತಿಷ್ಠಿತ ಕಂಪನಿಗೆ ಕೊಟ್ಟಿದ್ದೇವೆ. ಕೆಲಸ ಒಳ್ಳೆಯ ರೀತಿಯಲ್ಲಿ ಆಗಲಿ ಅಂತ ಹೇಳಿ. ಮಾನ್ಯ ಸದಸ್ಯರು ಕೇಳಿರತಕ್ಕಂಥಾದ್ದು ಬಹಳ ಮುಖ್ಯವಾಗಿ ಈಗ ಇರತಕ್ಕಂಥ ಯೋಜನೆಗಳ ಮೂಲಕ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಲು ಆಗುವುದಿಲ್ಲ ಅಂತ ಹೇಳಿದ್ದಾರೆ. ಅದಕ್ಕೆ ಸುಮಾರು 144 ಕೋಟಿ ರೂಪಾಯಿಗಳ ಯೋಜನೆ ಅದು ವಿಶ್ವಬ್ಯಾಂಕಿನಿಂದ ಹಣವನ್ನು ತಂದು ಈ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಹೇಳಿ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಈ ಯೋಜನೆಯನ್ನು ಆದಷ್ಟು ಬೇಗ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, 44 ಕೋಟಿ ರೂಪಾಯಿಗಳ ಯೋಜನೆ ಏನು ಇದೆ ಎರಡನೇ ಹಂತ ಮಲಪ್ರಭಾ; ಮಲಪ್ರಭಾದಲ್ಲಿ ಸಾಕಷ್ಟು ನೀರು ಇದೆಯೋ ಇಲ್ಲವೋ ಎನ್ನುವುದು ಪ್ರಶ್ನೆ. ಹಿಂದೆ ಪಿ.ವಿ.ಸಿ. ಪೈಪ್‌ಲೈನ್ ಹಾಕಿದ್ದರು. ಈ ದೃಷ್ಟಿಯಲ್ಲಿ ಎಷ್ಟು ಕಿಲೋಮೀಟರ್ ಪೈಪ್‌ಲೈನ್ ಸರಿ ಮಾಡುತ್ತಾರೆ? ಈ ಕಾಮಗಾರಿಯನ್ನು ಎಲ್ ಅಂಡ್ ಟಿ ಯವರೆಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಈ ಕಾಮಗಾರಿ ಯಾವಾಗ ಪ್ರಾರಂಭವಾಗುತ್ತದೆ? ಯಾವಾಗ ಈ ಕಾಮಗಾರಿಯನ್ನು ಮುಗಿಸುತ್ತಾರೆ? ಇದರ ಒಂದು ಪ್ರಕಾರ ಮಲಪ್ರಭಾದಲ್ಲಿ ಮೂರನೇ ಹಂತಕ್ಕೆ ನೀರು ಸಾಕಾಗುವುದಿಲ್ಲ ಅಂತ ಇದೆ. ಸುಮಾರು 130 ಕೋಟಿ ರೂಪಾಯಿಗಳ ಯೋಜನೆಯನ್ನು ವರ್ಲ್ಡ್ ಬ್ಯಾಂಕ್‌ಗೆ ಕಳುಹಿಸಿಕೊಟ್ಟು ಸುಮಾರು 5-6 ವರ್ಷಗಳಾಯತು ಇವತ್ತಿನವರೆಗೂ ಆ ವರ್ಲ್ಡ್ ಬ್ಯಾಂಕ್‌ನಿಂದ ಯಾವುದೇ ಉತ್ತರ ಇಲ್ಲ, ಏನೂ ಆಗಿಲ್ಲ. ಇವು ವರ್ಲ್ಡ್ ಬ್ಯಾಂಕ್ ಸ್ಕೀಮ್ಸ್ ಅಂತ ನಾವು ಹೇಳಿಕೊಂಡು ಬಂದಿದ್ದೇವೆ. ಮಾನ್ಯ ಸಚಿವರು ವರ್ಲ್ಡ್ ಬ್ಯಾಂಕ್‌ಗೆ ಹೋಗುವ ಬದಲು ಹುಡ್ಕೋ ಅಥವಾ ನಬಾರ್ಡ್ ಈ ರೀತಿಯ ಏಜನ್ಸಿಗಳನ್ನು ತೆಗೆದುಕೊಂಡು ಮಾಡಬೇಕು. ಬೆಂಗಳೂರು ಬಿಟ್ಟರೆ ನೆಕ್ಸ್ಟ್ ಅಭಿವೃದ್ಧಿಯಾಗಬೇಕಾಗಿರುವಂಥಾದ್ದು ಈ ಎರಡು ಅವಳಿ ನಗರಗಳು. ಮಾನ್ಯ ಸಚಿವರು ತಿಳಿಸಿದರು ಈಗ 12 ಎಂ.ಜಿ.ಡಿ. ನೀರು ಕೊಡುತ್ತಿದ್ದೇವೆಂದು ಅದು ಸಾಕಾಗುವುದಿಲ್ಲ ಅಂತ ಹೇಳಿದ್ದಾರೆ. ನಾನು ಈಗ ಕೇಳುವಂಥಾದ್ದು ಈಗ ಎಲ್ ಅಂಡ್ ಟಿ ಯವರಿಗೆ ಕೊಟ್ಟಿರುವ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಿ ಮುಗಿಸುವಂಥಾದ್ದು? ಮತ್ತು ಕಾಳಿ ನದಿಗೆ ಕೊಡುವಂತಹ 130 ಕೋಟಿ ರೂಪಾಯಿಗಳ ಯೋಜನೆ ವರ್ಲ್ಡ್ ಬ್ಯಾಂಕ್‌ನಿಂದ ಬರುವ ಹಣದ ಬಗ್ಗೆ ಏನು ಕಾರ್ಯ ಆಗಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು ಈಗ 18 ಎಂ.ಜಿ.ಡಿ. ನೀರನ್ನು ನೀರಸಾಗರದಿಂದ ಮತ್ತು ಮಲಪ್ರಭಾದಿಂದ ಸರಬರಾಜು ಮಾಡುತ್ತಿದ್ದೇವೆಂದು ಹೇಳಿದರು. ಆದರೆ ಅಲ್ಲಿ ವಾಸ್ತವವಾಗಿ ಬರುತ್ತಿರುವ ನೀರು 11 ಎಂ.ಜ.ಡಿ. ನೀರು ಮಾತ್ರ. ಇನ್ನು 7 ಎಂ.ಜಿ.ಡಿ. ನೀರು ಪೂರೈಕೆಯಾಗುತ್ತಿಲ್ಲ. ಅಲ್ಲಿ ನೀರು ಲೀಕೇಜ್ ಆಗುತ್ತಿದೆ. ಅದರ ಬಗ್ಗೆ

ಈಗಾಗಲೇ ಸಾಕಷ್ಟು ಚಿಂತನೆ ಆಗಿದೆ. ಈ ಸಮಸ್ಯೆಯನ್ನು ನಿವಾರಣೆ ಮಾಡಲು ಎನೂ ಪ್ರಯತ್ನ ನಡೆಯುತ್ತಿಲ್ಲ. ಮಲಪ್ರಭಾ ಮೂರನೇ ಹಂತಕ್ಕೆ ಮಲಪ್ರಭಾದಿಂದ ನೀರು ತರುವಂತಹ ಯೋಜನೆ ಮಾಡುತ್ತಿದ್ದೀರಿ. ಆ ಯೋಜನೆ 140 ಕೋಟಿ ರೂಪಾಯಿಗಳದ್ದು, ಆದರೂ ಆ ಯೋಜನೆ ಸಹ ನಿರುಪಯುಕ್ತವಾಗುತ್ತಿದೆ. ಏಕೆಂದರೆ ಮಲಪ್ರಭಾದಲ್ಲಿ ಮೂರನೇ ಹಂತದ ಯೋಜನೆಯಲ್ಲಿ ನೀರು ಸರಬರಾಜು ಮಾಡಲು ನೀರು ಇಲ್ಲ. ನಾವು ಸುಮ್ಮನೇ ಜನರ ಕಣ್ಣಿಗೆ ಮಣ್ಣು ಎರಚುವ ಕೆಲಸ ಮಾಡುವುದು ಬೇಡ. ಆದು ಬಿಟ್ಟು ಕಾಳಿ ನದಿಯಿಂದ ನೀರು ತರುವ ಯೋಜನೆಯನ್ನು ಏನಾದರೂ ತಾವು ಹಾಕಿಕೊಂಡರೆ ಬಹುಶಃ ಹುಬ್ಬಳ್ಳಿ ಧಾರವಾಡ ನಗರಕ್ಕೆ ಶಾಶ್ವತವಾಗಿ ಕುಡಿಯುವ ನೀರಿನ ಭವಣೆ ತಪ್ಪಿ ಹೋಗುತ್ತದೆ. ತಾವು ನಿಜುವಾಗಿಯೂ ಹುಬ್ಬಳ್ಳಿ ಧಾರವಾಡ ನಗರಕ್ಕೆ ಏನಾದರೂ ತಾವು ನೀರು ಪೂರೈಕೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಮಲಪ್ರಭಾ ಮೂರನೇ ಹಂತದ ಯೋಜನೆ ಬಗ್ಗೆ ಬಹಳ ತಲೆ ಕೆಡಿಸಿಕೊಳ್ಳಲಾರದೆ, ಈ ಒಂದು ಕಾಳಿ ನದಿ ಹುಬ್ಬಳ್ಳಿ ಧಾರವಾಡ ನಗರಕ್ಕೆ ಕೇವಲ 70 ಕಿಲೋಮೀಟರ್ ಮಾತ್ರ ಆಗುತ್ತದೆ, ಧಾರವಾಡದಿಂದ ಬರೇ 50 ಕಿಲೋಮೀಟರ್, ಈ ಯೋಜನೆ ಬಗ್ಗೆ ನಾನು ಶಾಸಕನಾಗಿದ್ದಾಗ ಕೇಳಿದ್ದೆ, ಆಗಿನಿಂದಲೂ ವರ್ಲ್ಡ್ ಬ್ಯಾಂಕ್ ಏಷಿಯನ್ ಬ್ಯಾಂಕ್ ಇವೆಲ್ಲಾ ಕೇಳಿದ್ದು ಆಯಿತು. ಇದು ಸರ್ಕಾರದ ಕಡೆಯಿಂದ ಖಾಯಂ ಉತ್ತರ. ತಾವು ಈ ಯೋಜನೆ ಹಣವನ್ನು ಹುಡ್ಕೋದಿಂದ ತರಲು ಏನಾದರೂ ಯೋಜನೆ ಮಾಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಬಚ್ಚೇಗೌಡರು ಹೇಳಿದಂತೆ ಈ ಯೋಜನೆಯನ್ನು ಎರಡು ವರ್ಷಗಳಲ್ಲಿ ಮುಗಿಸುತ್ತೇವೆ. ರೀಪ್ಲೇಸ್‌ಮೆಂಟ್ ಆಫ್ ಪೈಪ್ಸ್ ಮಾಡುತ್ತಿದ್ದೇವೆ. ಈಗ ಪಿ.ವಿ.ಸಿ. ಪೈಪ್ಸ್‌ನಿಂದಲೇ ಲೀಕೇಜ್ ಆಗುತ್ತಿರುವಂಥಾದ್ದು. ಜನರು ಕೂಡ ಕೆಲವು ವಿಚಾರದಲ್ಲಿ ಸಹಕಾರ ಕೊಡುವುದಿಲ್ಲ. ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದ್ದರೂ ಕೂಡ ತಮ್ಮ ಜಮೀನುಗಳಿಗೆ ನೀರು ಬಿಟ್ಟುಕೊಳ್ಳುತ್ತಾರೆ. ಇದನ್ನು ನಾನು ಸ್ವತಃ ನೋಡಿದ್ದೇನೆ. ರೈತರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದರೆ ಅದಕ್ಕೆ ಮತ್ತೊಂದು ರೂಪ ಕೊಡುತ್ತಾರೆ. ಆ ದೃಷ್ಟಿಯಿಂದ ಆದಷ್ಟು ಎಚ್ಚರಿಕೆಯಿಂದ ವರ್ತಿಸಬೇಕೆಂದು ನಾನು ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈಗ ಎಲ್ ಅಂಡ್ ಟಿ ಯವರು ಪೈಪ್ಸ್ ರಿಪೇರಿ ಮಾಡುವಂತಹ ಕೆಲಸ ಕೈಗೊಂಡಿದ್ದಾರೆ. ಈ ಕೆಲಸವನ್ನು ಎರಡು ವರ್ಷಗಳಲ್ಲಿ ಮುಗಿಸುತ್ತೇವೆ. ಈಗ 144 ಕೋಟಿ ರೂಪಾಯಿಗಳ ಯೋಜನೆಗೆ ಸಂಬಂಧಪಟ್ಟ ಹಾಗೆ ವಿಶ್ವಬ್ಯಾಂಕಿನವರು ಏಪ್ರಿಲ್ 9 ಮತ್ತು 19ನೇ ತಾರೀಖಿಗೆ ಇಲ್ಲಿಗೆ ಬರುವವರಿದ್ದಾರೆ. ಸುಮಾರು 10- 12 ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆನ್ನುವ ಒಂದು ಆಲೋಚನೆ ಅವರಿಗೆ ಇದೆ. ಉತ್ತರ ಕರ್ನಾಟಕ ಹಿಂದುಳಿದ ಪ್ರದೇಶಗಳ ಪಟ್ಟಣಗಳಿಗೆ ವಿಶೇಷ ಆದ್ಯತೆಯನ್ನು ನೀಡಬೇಕೆಂದು ಹೇಳಿ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೂಡ ಬಹಳ ಆಸಕ್ತಿಯನ್ನು ವಹಿಸಿದ್ದಾರೆ. ಆ ವಿಶ್ವಬ್ಯಾಂಕ್ ಟೀಮ್ ಬಂದು ಹೋದಮೇಲೆ ಆ ಬಗ್ಗೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೇವೆಂದು ನಾವು ಹೇಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಒಂದು ಸಲಹೆ. ಇಲ್ಲಿ ಎರಡು ಏಜನ್ಸಿಗಳು ಇವೆ. ಹುಬ್ಬಳ್ಳಿ ಧಾರವಾಡ ಮತ್ತು ವಾಟರ್ ಬೋರ್ಡ್. ನೀವು ಒಂದೇ ಏಜನ್ಸಿ ಮಾಡಿ. ಅದನ್ನು ಸರಿ ಮಾಡಿ. ಅದನ್ನು ಸರಿ ಮಾಡಿ. ಮತ್ತು ಪೈಪ್‌ಲೈನ್ ರೀಪ್ಲೇಸ್‌ಮೆಂಟ್ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಆದಷ್ಟು ಬೇಗ ಪ್ರಾರಂಭ ಮಾಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಒಳ್ಳೆಯ ಸಲಹೆ.